ಕಾಸು ಅವನ ಖಾತೆಯಲ್ಲಿ ಜಮಾವಣೆಯಾಗುತ್ತಿದ್ದುದು ಸಣ್ಣದೊಂದು ನಿಧಿಯಾಗಿತ್ತು. ನಳಿನಿಯನ್ನು ಸಂತೋಷವಾಗಿಡಲು ಅದನ್ನು ಕೈಬಿಚ್ಚಿ ಖರ್ಚು ಮಾಡುವುದರಲ್ಲಿ ಜಿಪುಣತೆ ತೋರಿಸಿರಲಿಲ್ಲ ಅನಂತ. ನಳಿನಿಯ ಕೈಗಳಿಗೆ ಪಚ್ಚೆಕಲ್ಲಿನ ಎರಡು ಬಳೆಗಳು ಬಂದಿದ್ದುವು. ಕೊರಳಿಗೊಂದು ನೆಕ್ಲೇಸ್. ಅವಳ ಅಪ್ಪನ ಮನೆಯಲ್ಲಿ ನಳಿನಿಗೆ ಹೇಳಿಕೊಳ್ಳುವಂತಾ ಯಾವ ಆಭರಣಗಳನ್ನೂ ತೊಡಿಸಿ ಕಳಿಸಿರಲಿಲ್ಲ. ಕಿವಿಗಳಲ್ಲಿ ಓಲೆ ಬಿಟ್ಟರೆ ಕೈಬೆರಳಿಗೊಂದು ಉಂಗುರ. ಮದುವೆಯ ದಿನ ಅನಂತನಿಗೂ ಒಂದು ಉಂಗುರ ತೊಡಿಸಿದ್ದು ಮಾವಯ್ಯನ ಮನೆಯಲ್ಲಿ ದೊರಕಿದ್ದ ಹೆಚ್ಚುಗಾರಿಕೆ. ಚಿನ್ನದಲ್ಲಿ ಸುತ್ತಿಸಿದ್ದ ಎರಡೆಳೆಯ ಮಾಂಗಲ್ಯಸರ ಅನಂತನ ಕೊಡುಗೆ. ವಾಸ್ತವವಾಗಿ ಅದು ಅವನ ಅಮ್ಮ ಧರಿಸುತ್ತಿದ್ದಿದ್ದು. ಬಂಗಾರದ ಎರಡು ಬಳೆಗಳೂ ಕೂಡಾ ಅಮ್ಮನ ಆಸ್ತಿ. ಮುರಿಸಿ ಹೊಸದು ಮಾಡಿಸುವ ಯೋಚನೆ ಬಂದರೂ ಅಂತರಾತ್ಮ ಒಪ್ಪದೆ ಅವಕ್ಕೆ ಪಾಲಿಷ್ ಮಾಡಿಸಿ ಹೊಸದರ ಹಾಗೆ ಕಾಣುವಂತೆ ಮಾಡಿಸಿದ್ದ ಅನಂತ. ನಳಿನಿಯ ಮನೆಯಲ್ಲಿ ಅಷ್ಟು ಚೌಕಾಶಿ ಮಾಡಬೇಕಾದ ಪರಿಸ್ಥಿತಿ ಇತ್ತಾ? ಅನಂತನಿಗೆ ಗೊತ್ತಿಲ್ಲ. ನಳಿನಿಯ ನಂತರ ಮತ್ತೆರಡು ಹೆಣ್ಣುಮಕ್ಕಳು ಮದುವೆಗೆ ಬೆಳೆದು ನಿಂತಿರುವುದನ್ನು ಕಂಡು ಇಂತಾ ಕೈ ಹಿಡಿತ ಸ್ವಾಭಾವಿಕವೆಂದು ಅವನು ಭಾವಿಸಿದ್ದ. ಚಿನ್ನಕ್ಕಿಂತಾ ಮಿಗಿಲಾದ ಹೆಂಡತಿ ದೊರಕಿದ್ದಳು. ಅದಕ್ಕಿಂತಾ ಹೆಚ್ಚೇನು ಬೇಕಿದೆ ಅನಂತನಿಗೆ?

"ನಮ್ಮ ಮಾವನ ಮನೇಲಿ ಐವತ್ತೈದು ಕೆ.ಜಿ. ಚಿನ್ನ ಹಾಕಿದಾರೆ" ಎಂದು ಅವನು ಹಾಸ್ಯದ ಮಾತಾಡುವುದಿತ್ತು.

"ಚುಡಾಯಿಸ್ತಿದೀರಾ?" ಕೇಳುತ್ತಿದ್ದಳು ನಳಿನಿ.

"ಇಲ್ಲ ಕಣೇ. ನನ್ನಾಣೆ, ದೇವರಾಣೆ, ಸತ್ಯ ಹೇಳ್ತಿದೀನಿ."

"ಹುಚ್ಚು ನಿಮಗೆ..."

ಗಂಡ ಹೊಸದಾಗಿ ಕೊಂಡು ತಂದ ಆಭರಣಗಳನ್ನು ಕಂಡು ಎಳೆಬಸುರಿ ಕಣ್ಣರಳಿಸಿದ್ದಳು.

"ನನ್ನ ಒಂದು ಮಾತು ಕೇಳ್ದೆ ಇದೆಲ್ಲಾ ಯಾಕೆ ತರೋಕೆ ಹೋದ್ರಿ? ಚಿನ್ನ ಬೇಕು ಅಂತ ನಾನೇನಾದ್ರೂ ನಿಮ್ಮನ್ನ ಕೇಳಿದ್ನಾ?"

"ನೀನು ಕೇಳ್ಲಿಲ್ಲ. ನಂಗೇ ತರ್ಬೇಕು ಅನ್ನಿಸ್ತು. ಮದುವೆ ಹೊತ್ತಿಗೆ ಮೂರುಕಾಸು ಚಿನ್ನಕ್ಕೆ ಅಂತ ಹಾಕಿರ್ಲಿಲ್ಲ ಕಣೇ. ಎಲ್ಲಾ ಅಮ್ಮಂದು, ಹೇಳಿದ್ನಲ್ಲ..."

"ಅದೇ ನಂಗೆ ಆಶೀರ್ವಾದ. ಸಂಸಾರ ಬೆಳೀತಿದೆ ಕಣ್ರೀ. ದುಡ್ಡಿನ ವಿಷಯದಲ್ಲಿ ಎಚ್ಚರಿಕೆ ಇರ್ಬೇಕು..."

"ನಿನ್ನಂತೋಳನ್ನ ನಾನು ನೋಡೇ ಇರ್ಲಿಲ್ಲ" ಅಂದಿದ್ದ ಅನಂತ.

ಬಾಯಲ್ಲಿ ಏನೇ ಅಂದರೂ ಹೆಂಡತಿ ಹೊಸ ಆಭರಣ ತೊಟ್ಟು, ಹಸಿರು ಸೀರೆ ಉಟ್ಟು, ಘಮ್ಮೆನ್ನುವ ಮಲ್ಲಿಗೆ ಮಾಲೆ ಮುಡಿದು, ನಕ್ಷತ್ರಗಳ ಬೆಳಕನ್ನು ಕಣ್ಣುಗಳಲ್ಲಿ ಮಿಂಚಿಸುತ್ತಾ ಅನಂತನನ್ನು ಎದುರ್ಗೊಂಡು ಅವನಿಗೆ ಅಮಲೇರಿಸಿದ್ದಳು ಅದೊಂದು ದಿನ. ಮನೆಯಲ್ಲಿ ಊಟಕ್ಕೆ ಹಬ್ಬದಡುಗೆ.

"ಇವತ್ತೇನು ವಿಶೇಷ?" ಕೇಳಿದ್ದ ಅನಂತ.

ಕುತೂಹಲದ ಮೊಟ್ಟೆಯೊಡೆದಿತ್ತು.

"ಐದನೇ ತಿಂಗಳು ಶುರುವಾಯ್ತಲ್ವಾ? ಯಾಕೋ ಮದುಮಗಳ ಥರ ಅಲಂಕಾರ ಮಾಡ್ಕೋಬೇಕು ಅನ್ನಿಸ್ತು..."

"ಬಯಕೆ?"

"ಹಾಗೇ ಅಂದ್ಕೊಳ್ಳಿ..."

ಪಾಯಸಕ್ಕಿಂತಾ ಹೆಚ್ಚಾಗಿ ಹೆಂಡತಿಯ ಸೊಬಗನ್ನು ಕಣ್ಣುಗಳಲ್ಲಿ ಹೀರುತ್ತಾ ಅನಂತ ಹೇಳಿದ್ದ,